# ‘ಬಿಗ್ ಬಾಸ್’ಗೆ ಮತ್ತೆ ಹೋಗಲು ಸಿದ್ಧ

## ಭಾಗ್ಯಶ್ರೀ
### ಉದಯದ ‘ಅನುಪಲ್ಲವಿ’ ಪ್ರಭಾವತಿ

■ ರಾಘವೇಂದ್ರ ಕೆ.

◆ ಬಣ್ಣದ ಬದುಕು ಆರಂಭವಾಗಿದ್ದು ಹೇಗೆ?

ಬೆಂಗಳೂರಿನ ರಾಜಾಜಿನಗರದಲ್ಲಿ ಹುಟ್ಟಿ ಬೆಳೆದವಳು. ಓದುತ್ತಿರುವಾಗಲೇ ಭರತನಾಟ್ಯ ಮತ್ತು ಸಂಗೀತ ಅಭ್ಯಾಸ ಮಾಡಿರುವೆ. ಸಾಂಸ್ಕೃತಿಕ ಚಟುವಟಿಕೆಯಲ್ಲಿ ಆಸಕ್ತಿಯಿತ್ತು. ನಮ್ಮ ಕುಟುಂಬದಲ್ಲಿ ಯಾರೂ ಸಿನಿಮಾ ಕ್ಷೇತ್ರದಲ್ಲಿ ಇಲ್ಲ. ಪದವಿಯ ನಂತರ ‘ಕುಟುಂಬ’ ಧಾರಾವಾಹಿಯಲ್ಲಿ ಗಿರಿಜಾ ಲೋಕೇಶ್ ಅವರಿಗೆ ಮೊಮ್ಮಗಳಾಗಿದ್ದೆ. ಸ್ವಲ್ಪ ದಿನ ‘ಕಾಮಿಡಿ ಟೈಮ್’, ‘ವನಿತೆ’, ‘ನಿಮ್ಮಿಂದ ನಿಮಗಾಗಿ’ ಕಾರ್ಯಕ್ರಮಗಳಿಗೆ ಆ್ಯಂಕರ್ ಕೂಡ ಆಗಿದ್ದೆ. ಖಾಸಗಿ ರೇಡಿಯೊದಲ್ಲಿ ಆರ್‌ಜೆ ಕೆಲಸ ಮಾಡುತ್ತಿದ್ದೆ. ಫ್ರೀಲಾನ್ಸ್ ಮಾಡುತ್ತಿದ್ದರಿಂದ ಇವೆಲ್ಲವನ್ನೂ ಮಾಡಲು ಆಗುತ್ತಿತ್ತು. ರೇಡಿಯೊದಲ್ಲಿ ‘ಸೂಪರ್ ದಂಪತಿ’, ‘ಬಿಸಿಬೇಳೆ ಬಾತ್’ ಕಾರ್ಯಕ್ರಮ ನಡೆಸಿಕೊಡುತ್ತಿದ್ದೆ. ಅದೇ ಪೂರ್ಣಾವಧಿ ಕೆಲಸವೂ ಆಯಿತು. ತೆರೆಯ ಹಿಂದೆ ಇರುವುದು ಇಷ್ಟ ಆಗದ ಕಾರಣ, ಕೆಲವೇ ದಿನಗಳಲ್ಲಿ ಆ ಕೆಲಸವನ್ನ ಬಿಟ್ಟು ಪೂರ್ಣಾವಧಿ ನಟಿಯಾದೆ.

◆ ನಿಮಗೆ ಖುಷಿ ಕೊಟ್ಟ ಪಾತ್ರ ಯಾವುದು?

‘ಲಕ್ಷಣ’ದಲ್ಲಿ ಜಯ ಪಾತ್ರ ಚೆನ್ನಾಗಿತ್ತು. ‘ಲಕ್ಷ್ಮೀ ಬಾರಮ್ಮ’ದ ಪಾತ್ರವೂ ಇಷ್ಟವಿತ್ತು. ಅದಕ್ಕೆ ಕಲರ್ಸ್ ಕನ್ನಡದ ಅನುಬಂಧ ಅವಾರ್ಡ್ ಕೂಡ ಬಂತು. ಮುಖ್ಯಪಾತ್ರವೇ ಆಗಿದ್ದರೂ ನೆಗೆಟಿವ್. ಆಗ ತಾಯ್ತನದ ನಿರೀಕ್ಷೆಯಲ್ಲಿ ಇದ್ದೆ. ಮಗು ಜನಿಸುವ ಪೂರ್ವದ ಎರಡು ತಿಂಗಳು ನಟನೆಗೆ ರಜೆ ಹೇಳಿದವಳು, ನಾಲ್ಕು ವರ್ಷದ ನಂತರ ಮರಳಿ ಬಂದೆ. ಆಮೇಲೆ ನೆಗೆಟಿವ್ ಪಾತ್ರ ಒಂದೂ ಮಾಡಲಿಲ್ಲ. ತಾಯಿಯ ಪಾತ್ರಗಳು ಸಿಗಲು ಆರಂಭಿಸಿದವು. ‘ಲಕ್ಷಣ’ದ ಅಮ್ಮ ತ್ಯಾಗಮಯಿ. ತನ್ನ ಸರ್ವಸ್ವವೇ ಮಕ್ಕಳಿಗಾಗಿ ಮೀಸಲು ಇಟ್ಟ ಮಮತಾಮಯಿ. ಪತಿಗೆ ಕುಟುಂಬದ ಜವಾಬ್ದಾರಿ ಇಲ್ಲ. ಹೆಂಡತಿಯ ಮೇಲೆ ನಿರಂತರ ದೌರ್ಜನ್ಯ ಎಸಗುತ್ತಾನೆ. ಅಂತಹ ಹಿಂಸೆಯನ್ನು ನಾನು ಎಲ್ಲೂ ನೋಡಿರಲಿಲ್ಲ. ಆ ಪಾತ್ರವನ್ನು ನೋಡಿ ಆಘಾತಗೊಂಡಿದ್ದೆ. ಮೊದಲ ದೃಶ್ಯವೇ ಕೈ ಮೇಲೆ ಕರ್ಪೂರವನ್ನು ಹಚ್ಚಿಕೊಂಡು ಕೆಂಡವನ್ನು ತುಳಿಯಬೇಕಿತ್ತು. ಆ ದೃಶ್ಯವನ್ನು ಕೇಳಿಯೇ ಒಪ್ಪಿದ್ದು ಕೂಡ. ಮಂಡಿಯಲ್ಲಿ ಮೆಟ್ಟಿಲು ಹತ್ತಿ ದೇವಸ್ಥಾನಕ್ಕೆ ಹೋಗಬೇಕಿತ್ತು. ಮೂವತ್ತು ಮೆಟ್ಟಿಲು ಹತ್ತಿದ ನಂತರ ಮೂರ್ಛೆ ಹೋಗಬೇಕು. ಅದನ್ನು ಮನೋಜ್ಞವಾಗಿ ನಿರ್ವಹಿಸಿದ್ದೆ ಎಂದು ನಮ್ಮ ತಂಡ ಕೊಂಡಾಡಿತು.



◆ ಪ್ರೇಕ್ಷಕರ ಪ್ರೀತಿ, ಪ್ರತಿಕ್ರಿಯೆ ಬಗ್ಗೆ ಹೇಳಿ.

ನನಗೆ ತುಂಬ ಒಳ್ಳೆಯ ಪ್ರತಿಕ್ರಿಯೆಗಳೇ ಬಂದಿವೆ. ನಗುನಗುತ್ತಾ ಮಾತನಾಡಿಸುವ ಬಗ್ಗೆ ಅಚ್ಚರಿಯ ಮೆಚ್ಚುಗೆ ಸಿಕ್ಕಿದೆ. ಪಾತ್ರಗಳ ಬಗ್ಗೆಯೂ ಅಪಾರ ಒಲವು ವ್ಯಕ್ತಪಡಿಸುವ ಅವರು ರಿಯಲ್ ಜೀವನದಲ್ಲಿಯೂ ಸರಳವಾಗಿದ್ದೀರಿ ಎನ್ನುವ ಪ್ರಶಂಸೆಯ ಮಾತುಗಳನ್ನು ಆಡುತ್ತಾರೆ. ಮಾರುಕಟ್ಟೆ, ದೇವಸ್ಥಾನಗಳಿಗೆ ನಿಯಮಿತವಾಗಿ ಹೋಗುತ್ತಿರುತ್ತೇನೆ. ಅಲ್ಲಿ ಕಂಡವರು ಎಷ್ಟು ಸಿಂಪಲ್ ನೀವು ಎನ್ನುತ್ತಾರೆ. ಅದೂ ‘ಬಿಗ್ ಬಾಸ್’ ಮನೆಯಿಂದ ಹೊರ ಬಂದ ಮೇಲೆ ಇನ್ನೂ ಜಾಸ್ತಿಯಾಯಿತು. ಫೋಟೊ, ಸೆಲ್ಫಿಯನ್ನು ಕೇಳುತ್ತಾರೆ. ಧಾರಾಳವಾಗಿ ಕೊಡುತ್ತೇನೆ, ಅದೆಲ್ಲ ಖುಷಿ ಕೊಡುತ್ತದೆ.

◆ ಮತ್ತೆ ಬಿಗ್ ಬಾಸ್‌ಗೆ ಆಹ್ವಾನ ಬಂದರೆ, ಏನು ಮಾಡುತ್ತೀರಿ?

ಖಂಡಿತ ಹೋಗಲು ಸಿದ್ಧ ಇದ್ದೇನೆ. ನಾಳೆ ಕರೆದರೂ ಹೋಗುತ್ತೇನೆ. ತುಂಬ ಜನ ಅಲ್ಲಿಗೆ ಮಾತ್ರ ಹೋಗಬಾರದು ಎನ್ನುತ್ತಾರೆ. ಈ ಹಿಂದೆ 50 ದಿನ ಆ ಮನೆಯಲ್ಲಿ ಬದುಕಿ ಬಂದಿದ್ದೇನೆ. ಜಗಳ ಮಾಡಬೇಕಿತ್ತು, ಹಾಗಿದ್ದರೆ ಇನ್ನೂ ಇರಬಹುದಿತ್ತು ಎಂದು ಕೆಲವರು ಹೇಳುತ್ತಾರೆ. ನನ್ನದೇ ರೀತಿಯಲ್ಲಿ ಅಲ್ಲಿದ್ದೆ. ಸುದೀಪ್ ಕೂಡ ‘ಇನ್ನೊಂದು ಸ್ವಲ್ಪದಿನ ಇದ್ದಿದ್ದರೆ ಬೃಂದಾವನ ಮಾಡುತ್ತಿದ್ರಿ’ ಎಂದಿದ್ದರು.

ಮತ್ತೊಂದು ಪಾತ್ರದಲ್ಲಿ ಕಾಣುವ ಕಲಾವಿದರಿಗೆ ವೈಯಕ್ತಿಕ ಬದುಕಿನಲ್ಲಿ ಕಾಣಿಸಿಕೊಳ್ಳಲು ರಿಯಾಲಿಟಿ ಶೋ ಒಂದು ವೇದಿಕೆ. ಕಲಾವಿದರೂ ಮನುಷ್ಯರು. ಮೇಕಪ್ ತೆಗೆದ ನಂತರ ಅವರಿಗೂ ಖಾಸಗಿ ಬದುಕು, ಬಯಕೆ ಇರುತ್ತದೆ. ಅವರ ಭಾವನೆಗಳು ಸಹಜವಾಗಿಯೇ ಮಿಡಿಯುತ್ತವೆ. ಅವರಲ್ಲೂ ಸಿಟ್ಟು, ದುಃಖ, ಜಗಳ, ಅನುಕಂಪ... ಇರುತ್ತದೆ. ನಟನೆ ಎನ್ನುವುದು ವೃತ್ತಿಯಾಗಿದ್ದರಿಂದ ಜೀವನದ ಭಾಗ ಅಷ್ಟೆ. ಆ್ಯಕ್ಷನ್ ಎಂದ ತಕ್ಷಣ ಪಾತ್ರವಾಗುತ್ತೇವೆ. ಕಟ್ ಎಂದರೆ ನಮ್ಮ ಸಹಜ ಸ್ಥಿತಿಗೆ ಮರಳುತ್ತೇವೆ. ■